ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಇಂದು ದಿನಾಂಕ:01.08.2026 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನಬೋಧಿಸಲಾಯಿತು.

**ಪಾಟಿ ಸವಾಲು: ಅರ್ಜಿದಾರ ಪರ ವಕೀಲರಾದ ಶ್ರೀ ಎಮ್.ಬಿ.ಬಿ ರವರಿಂದ**:

1) ನಾನು ಪಿ.ಯೂ.ಸಿ ವರೆಗೆ ವಿಧ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಓದಲು, ಬರೆಯಲು ಬರುತ್ತದೆ. ಅರ್ಜಿದಾರರು ಈ ಪ್ರಕರಣವನ್ನು ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ಅಪಘಾತವು ಶಿವಾಪೂರ-ಮೂಡಲಗಿ ರಸ್ತೆಯ ಕಿನಾಲ್ ಹತ್ತಿರ ನಡೆದಿರುತ್ತದೆ. ಅರ್ಜಿದಾರನಿಗೆ ಡಿಕ್ಕಿಪಡಿಸಿದ ಗಾಡಿ ಯಾವ ಗಾಡಿ ಎಂದರೆ ಸಾಕ್ಷಿ ನನ್ನ ಓಡಿಸುತ್ತಿದ್ದ ಗಾಡಿ ಸುಜುಕಿ ಇರುತ್ತದೆ, ಮುಂದುವರೆದು ಎದುರುಗಡೆ ಗಾಡಿ ನನ್ನ ಅಣ್ಣನ ಗಾಡಿಗೆ ಡಿಕ್ಕಿಪಡಿಸಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಣ್ಣನು ಸುಜುಕಿ ಗಾಡಿಯಿಂದ ಅರ್ಜಿದಾರರ ಗಾಡಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

2) ಮೂಡಲಗಿ ಪೋಲಿಸ್ ಠಾಣಾಧಿಕಾರಿಗಳು ಅಪಘಾತವು ಮೃತ ಭೀಮಪ್ಪ ಸತ್ತೆಪ್ಪ ಪಚ್ಚಾಪೂರ ರವರ ನಿರ್ಲಕ್ಷತೆಯಿಂದ ನಡೆದಿರುತ್ತದೆ ಎಂದು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದೋಷಾರೋಪಣೆ ಪಟ್ಟಿಯನ್ನು ಪ್ರಶ್ನಿಸಿ ಯಾವುದೇ ಮಾನ್ಯ ನ್ಯಾಯಾಲಯಲದಲ್ಲಿ ಅಪೀಲ್ ಸಲ್ಲಿಸಿಲ್ಲಾ ಎಂದರೆ ಸರಿ. ನಮ್ಮ ಸುಜುಕಿ ಗಾಡಿಗೆ ವಿಮೆ ಪಾಲಿಸಿ ಇರಲಿಲ್ಲಾ ಎಂದರೆ ಸರಿ. ಅದೇ ರೀತಿ ನಮ್ಮ ಅಣ್ಣನಾದ ಮೃತ ಭೀಮಪ್ಪ ಸತ್ತೆಪ್ಪ ಪಚ್ಚಾಪೂರ ರವರಿಗೆ ಚಾಲನಾ ಪತ್ರ ಇರಲಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತದಲ್ಲಿ ಸದರಿ ಚಾಲನಾ ಪತ್ರ ಕಳೆದು ಹೋಗಿರುತ್ತದೆ ಎಂದು ನುಡಿಯುತ್ತಾರೆ.

3) ನಮ್ಮ ಅಣ್ಣನಾದ ಮೃತ ಭೀಮಪ್ಪ ಸತ್ತೆಪ್ಪ ಪಚ್ಚಾಪೂರ ರವರಿಗೆ ಚಾಲನಾ ಪತ್ರ ಇರದೇ ಇದ್ದರೂ, ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶಾಂತಮ್ಮ ಮಲ್ಲಿಕಾರ್ಜುನಗೌಡ ಪಿ.)
ಹಿರಿಯ ದಿವಾಣಿ ನ್ಯಾಯಾಧೀಶರು,
ಮೂಡಲಗಿ

ಸಾಕ್ಷಿಯ ಸಹಿ